**ಸಾಕ್ಷಿಗೆ ದಿನಾಂಕಃ 28-02-2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಆರ್ ಬಿ ವಕೀಲರಿಂದಃ**

1. ಅರ್ಜಿದಾರರಿಗೆ ನಾನು ಮೂಲತಃ ಚಿಕಿತ್ಸೆ ನೀಡಿದ ವೈದ್ಯನಾಗಿರುವುದಿಲ್ಲ. ಅರ್ಜಿದಾರರಿಗೆ ಚಿಕಿತ್ಸೆ ನೀಡಿದ ವೈದ್ಯರ ಅಭಿಪ್ರಾಯ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ಅರ್ಜಿದಾರರು ಸ್ಪಂದನಾ ಆಸ್ಪತ್ರೆಯಲ್ಲಿ ನ್ಯೂರೋ ಚಿಕಿತ್ಸೆ ಮತ್ತು ವೈದ್ಯರ ಅಭಿಪ್ರಾಯ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಅರ್ಜಿದಾರರಿಗೆ ನರ ಶಸ್ತ್ರಚಿಕಿತ್ಸೆಯಾಗಿರುತ್ತದೆ.

2. ಅರ್ಜಿದಾರರಿಗೆ ಅಂಗನ್ಯೂನತೆ ನಿರ್ಧರಿಸಲು ಸ್ಪಂದನಾ ಆಸ್ಪತ್ರೆ ಮತ್ತು ಆರ್ ಎಲ್ ಜಾಲಪ್ಪ ಆಸ್ಪತ್ರೆಯ ಡಿಸ್ಚಾರ್ಜ್ ಸಮ್ಮರಿಗಳನ್ನು ನೋಡಿರುತ್ತೇನೆ. ಅರ್ಜಿದಾರರು ಎರಡು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಅರ್ಜಿದಾರರಿಗೆ ಸ್ಪಂದನಾ ಆಸ್ಪತ್ರೆಯಲ್ಲಿ DECOMPRESSIVE CRANIECTOMY ಶಸ್ತ್ರಚಿಕಿತ್ಸೆಯಾಗಿರುತ್ತದೆ. ಅರ್ಜಿದಾರರು ಸ್ಪಂದನಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಸಮಯದಲ್ಲಿ ಅವರ GCS Score E1-Vt-M4 ಇತ್ತು.

3. ದಿಃ27.09.2023 ರಂದು ಅರ್ಜಿದಾರರು ಸ್ಪಂದನಾ ಆಸ್ಪತ್ರೆಯಿಂದ ಬಿಡುಗಡೆ ಹೊಂದಿ ಮರುದಿನ ಅಂದರೆ ದಿಃ28.09.2023 ರಂದು ಆರ್ ಎಲ್ ಜಾಲಪ್ಪ ಆಸ್ಪತ್ರೆಯಲ್ಲಿ ದಾಖಲಾಗಿರುತ್ತಾರೆ. ಸಾಮಾನ್ಯವಾಗಿ ಯಾವುದೆ ವ್ಯಕ್ತಿಗೆ ತಲೆಗೆ ತೀವ್ರವಾದ ಈ ತರವಾದ ಗಾಯವಾದರೆ ತಕ್ಷಣಕ್ಕೆ ಪ್ರಜ್ಞೆ ತಪ್ಪುತ್ತಾರೆ ಎಂದರೆ ಸರಿ. ಅರ್ಜಿದಾರರು ದಿಃ22.09.2023 ರಂದು ಬೆಳಗ್ಗೆ 5-30 ರ ಸಮಯದಲ್ಲಿ ಪ್ರಜ್ಞಾಹೀನಾ ಸ್ಥಿತಿಯಲ್ಲಿ ಕಂಡುಬಂದಿರುತ್ತಾರೆ ಎಂದು ಸ್ಪಂದನಾ ಆಸ್ಪತ್ರೆಯ ದಾಖಲೆಗಳಲ್ಲಿ ನಮೂದಾಗಿರುತ್ತದೆ. ಅರ್ಜಿದಾರರಿಗೆ ಆ ಸಮಯದಲ್ಲಿ ವಾಂತಿಯಾಗಿತ್ತು ಮತ್ತು ಮೂಗಿನಿಂದ ರಕ್ತ ಬರುತ್ತಿತ್ತು ಎಂದು ಸಹ ನಮೂದಿಸಿರುತ್ತಾರೆ. ಅರ್ಜಿದಾರರಿಗೆ ಉಂಟಾಗಿರುವ ಗಾಯಗಳ ಅವಧಿಯ ಬಗ್ಗೆ ಸಿಟಿ ಸ್ಕಾನ್ ಮೂಲಕ ಸ್ವಲ್ಪ ಮಟ್ಟಿಗೆ ಕಂಡು ಬರುತ್ತದೆ. ಹೊರನೋಟಕ್ಕೆ ಕಾಣುವ ಗಾಯಗಳ ಅವಧಿಯನ್ನು ರಕ್ತದ ಹೆಪ್ಪುಗಟ್ಟುವಿಕೆಯ ಆಧಾರದ ಮೇಲೆ ಕಂಡು ಹಿಡಿಯಬಹುದು ಎಂದರೆ ಸರಿ.

4. ಸ್ಪಂದನಾ ಆಸ್ಪತ್ರೆಯಲ್ಲಿ ಅರ್ಜಿದಾರರ ಮೂಗಿನಲ್ಲಿ ಬರುತ್ತಿರುವ ಬಗ್ಗೆ ನಮೂದಿಸಿದ್ದು ಆದರೆ ಗಾಯದ ಸ್ವರೂಪವನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಆರ್ ಎಲ್ ಜಾಲಪ್ಪ ಆಸ್ಪತ್ರೆಯಲ್ಲಿ ದಿ:28.09.2023 ರಂದು ಅರ್ಜಿದಾರರಿಗೆ ಶಸ್ತ್ರಚಿಕಿತ್ಸೆ ಮಾಡಿರುತ್ತಾರೆ. ಅರ್ಜಿದಾರರು ಆರ್ ಎಲ್ ಜಾಲಪ್ಪ ಆಸ್ಪತ್ರೆಯಿಂದ ಬಿಡುಗಡೆಯಾಗುವಾಗ ಅರ್ಜಿದಾರರ ಜಿ ಸಿ ಎಸ್ ಅಂಕ 15/15 ಇತ್ತು ಮತ್ತು ಎಡಗಡೆಯ ಭಾಗದಲ್ಲಿ ಅಶಕ್ತತೆ ಇತ್ತು ಎಂದು ನಮೂದಿಸಿರುತ್ತಾರೆ. ದಿ:21.09.2023 ರಂದು ಸಂಜೆ 5.30 ಕ್ಕೆ ಅರ್ಜಿದಾರರು ರಸ್ತೆ ಅಪಘಾತದಲ್ಲಿ ಗಾಯಗೊಂಡ ನಂತರ ಬೆಳಗಿನ ಜಾವ 5.30 ರ ಸಮಯದವರೆಗೆ ಎಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಎಂದು ಮಾಹಿತಿ ಇರುವುದಿಲ್ಲ. ಆರ್ ಎಲ್ ಜಾಲಪ್ಪ ಆಸ್ಪತ್ರೆಯ ಬಿಡುಗಡೆ ಪತ್ರದಲ್ಲಿ ಅರ್ಜಿದಾರರು ಚಿಕಿತ್ಸೆ ಪಡೆಯುವ ಸಂದರ್ಭದಲ್ಲಿ Alert and oriented, obeying commands, speech normal ಆಗಿ ಇತ್ತು ಎಂದು ನಮೂದಾಗಿದೆ ಎಂದರೆ ಸರಿ.

5. ಅರ್ಜಿದಾರರಿಗೆ ಸಂಬಂಧಿಸಿದ ಪುನರ್ವಸತಿ ಕೇಂದ್ರದ ದಾಖಲೆಗಳನ್ನು ನೋಡಿರುವುದಿಲ್ಲ. ಆರ್ ಎಲ್ ಜಾಲಪ್ಪ ಆಸ್ಪತ್ರೆಯ ಬಿಡುಗಡೆ ಪತ್ರದಲ್ಲಿ ಅರ್ಜಿದಾರರು ಬಿಡುಗಡೆ ಹೊಂದುವ ಸಮಯದಲ್ಲಿ ಅರ್ಜಿದಾರರ ಜಿ ಸಿ ಎಸ್ ಅಂಕ 15/15 , ಎಡಗಡೆ ಭಾಗದಲ್ಲಿ ಅಶಕ್ತತೆ, Alert and oriented, obeying commands, speech normal ಆಗಿ ಇತ್ತು ಎಂದು ನಮೂದಾಗಿದೆ ಎಂದರೆ ಸರಿ. ಸಾಮಾನ್ಯವಾಗಿ ಗಾಯಾಳುವಿನ ಭೌತಿಕ ಚಿಕಿತ್ಸೆ ಮತ್ತು ಪುನರ್ವಸತಿ ಕೇಂದ್ರದ ಚಿಕಿತ್ಸೆಯ ದಾಖಲೆಗಳಲ್ಲಿ ಗಾಯಾಳು ಗುಣುಮುಖನಾಗುತ್ತಿರುವ ಬಗ್ಗೆ ಉಲ್ಲೇಖವಿರುತ್ತದೆ ಎಂದರೆ ಸರಿ.

6. ಆರ್ ಎಲ್ ಜಾಲಪ್ಪ ಆಸ್ಪತ್ರೆಯ ದಾಖಲೆಗಳ ಪ್ರಕಾರ ಅರ್ಜಿದಾರರಿಗೆ CRANIECTOMY and TRACHEOSTOMY ಗುಣಮುಖವಾಗಿವೆ ಎಂದರೆ ಸರಿ. ಅರ್ಜಿದಾರರಿಗೆ ಉಂಟಾದ ಗಾಯಗಳು ಗಟ್ಟಿಯಾದ ವಸ್ತುವಿನಿಂದ ತಲೆಗೆ ಹೊಡೆದಾಗ ಆಗುವ ಸಾಧ್ಯತೆಗಳು ಇರುತ್ತವೆ ಎಂದರೆ ಸರಿ. ಅರ್ಜಿದಾರರ ಡಿಸ್ಚಾರ್ಜ್ ಸಮ್ಮರಿಯಲ್ಲಿ ಅರ್ಜಿದಾರರ ದೇಹದ ಬೇರೆ ಅಂಗದ ಮೇಲೆ ಬೇರೆ ಯಾವುದೇ ಗಾಯಗಳು ಕಂಡು ಬಂದ ಬಗ್ಗೆ ನಮೂದು ಇರುವುದಿಲ್ಲ ಎಂದರೆ

ಸರಿ. ಸಾಮಾನ್ಯವಾಗಿ ತಲೆಗೆ ರಕ್ಷಣೆ ಇಲ್ಲದೇ ಇದ್ದಾಗ ಈ ರೀತಿಯ ಗಾಯಗಳು ಉಂಟಾಗುವ ಸಾಧ್ಯತೆ ಇವೆ ಎಂದರೆ ಸರಿ.

7. ಅರ್ಜಿದಾರರಿಗೆ Skull X-ray, CT Brain, Neuropsychological Assessment and mini mental state exam ನಡೆಸಲಾಗಿರುತ್ತದೆ. ಅರ್ಜಿದಾರರಿಗೆ ಸಂಬಂಧಿಸಿದಂತೆ Neuropsychological Assessment ಮಾಡಿದವರು ಡಾ. ಜಯಂತಿ ಎಂದರೆ ಸರಿ. ಅರ್ಜಿದಾರರಿಗೆ Neuropsychological Assessment ಮಾಡುವಾಗ ಅವರ ಜೊತೆಗೆ ಅವರ ಸಹೋದರ [Cousin] ಇದ್ದರು ಎಂದು ನಮೂದಾಗಿರುತ್ತದೆ ಎಂದರೆ ಸರಿ. ಅರ್ಜಿದಾರರಿಗೆ Neuropsychological Assessment ಮಾಡುವಾಗ ಚಿತ್ರೀಕರಣ ಮಾಡಿರುವುದಿಲ್ಲ. ಅರ್ಜಿದಾರರಿಗೆ ನಾನು ಅಂಗನ್ಯೂನತೆಯ ಪರೀಕ್ಷೆ ನಡೆಸುವಾಗ ಅರ್ಜಿದಾರರ ಸಹೋದರ ಸಂಬಂಧಿ [Brother-in-law] ಜೊತೆಗೆ ಇದ್ದರು.

8. ಅರ್ಜಿದಾರರಿಗೆ ಶಸ್ತ್ರಚಿಕಿತ್ಸೆಯಾಗಿರುವುದರಿಂದ ಕಣ್ಣಿನ ಪ್ರತಿಕ್ರಿಯೆಗಳಲ್ಲಿ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಡಿಸ್ಚಾರ್ಜ್ ಸಮಯದಲ್ಲಿ ಅರ್ಜಿದಾರರಿಗೆ Left Hemiparesis ಇರುವುದು ನೇರವಾಗಿ ಜಿ ಸಿ ಎಸ್ ಅಂಕಕ್ಕೆ ಸಂಬಂಧಿಸಿದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ Left Hemiparesis ಇರುವುದು ಮತ್ತು Alert and oriented, obeying commands, speech normal ಆಗಿ ಇತ್ತು ಎಂದು ಹೇಳುವುದು ಒಂದಕ್ಕೊಂದು ವ್ಯತಿರಿಕ್ತತೆದಿಂದ ಕೂಡಿದೆ ಎಂದರೆ ಸರಿಯಲ್ಲ.

9. ಅರ್ಜಿದಾರರು ಸಂಪೂರ್ಣ ಚಿಕಿತ್ಸೆ ಪಡೆದುಕೊಂಡ ನಂತರ ಅವರ ಈಗಿನ ದೈಹಿಕ ಸ್ಥಿತಿಗತಿಯ ಬಗ್ಗೆ ತೋರಿಸಲು ದಾಖಲೆಗಳಾಗಲೀ ಅಥವಾ ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಅರ್ಜಿದಾರರು ಡಿಸ್ಚಾರ್ಜ್ ಸಮಯದಲ್ಲಿ ಇದ್ದ Left Hemiparesis ಈಗಾಲು ಇದೆ ಎಂದು ತೋರಿಸಲು ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಕ್ಲಿನಿಕಲ್ ಪರೀಕ್ಷೆ ಮಾಡುವಾಗ Left Hemiparesis ಇತ್ತು ಎಂದು ನುಡಿಯುತ್ತಾರೆ.

10. ಅರ್ಜಿದಾರರು ಹೇಳಿದಂತಹ ತೊಂದರೆಗಳನ್ನು ನಮೂದಿಸಿರುತ್ತೇವೆ ಎಂದರೆ ಸ್ವಲ್ಪ ಮಟ್ಟಿಗೆ ಸರಿ. ಅರ್ಜಿದಾರರು ತಮ್ಮ ಅನುಕೂಲಕ್ಕಾಗಿ ಯಾವುದೇ ಮಟ್ಟುದಲ್ಲಿ ಆದರೂ ಸುಳ್ಳು ತೊಂದರೆಗಳನ್ನು ಹೇಳಬಹುದು ಎಂದರೆ ಸ್ವಲ್ಪ ಮಟ್ಟಿಗೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಅರ್ಜಿದಾರರು ಸಾಕ್ಷ್ಯ ನುಡಿಯಲು ಸಮರ್ಥರಲ್ಲ ಎಂದು ಹೇಳಿರುವುದಿಲ್ಲ ಎಂದರೆ ಸರಿ. IQ, MMSE ಪರೀಕ್ಷೆಗಳು ಒಂದೇಯಾಗಿದ್ದು, Motor disability ಪರೀಕ್ಷೆ ಬೇರೆಯಾಗಿರುತ್ತದೆ. ನಾನು ನರತಜ್ಞ ಎಂದರೆ ಸರಿ. ನಾನು ನರಅಂಗನ್ಯೂನತೆಯನ್ನು Motor disability ಪರೀಕ್ಷೆ ಮಾಡಿ ಅಂಗನ್ಯೂನತೆಯನ್ನು ನಿರ್ಧರಿಸಲು ಬರುವುದಿಲ್ಲ ಎಂದರೆ ಸರಿ. Motor disability ಪರೀಕ್ಷೆಯನ್ನು ಮೂಳೆಮುರಿತ ತಜ್ಞ ವೈದ್ಯರು ಮಾತ್ರ ಮಾಡಬೇಕು ಎಂದರೆ ಸರಿಯಲ್ಲ.

11. ಅರ್ಜಿದಾರರು ಉದ್ದೇಶಪೂರ್ವಕವಾಗಿ MMSE, Neuropsychological ಪರೀಕ್ಷೆಗೆ ಸಹಕರಿಸಿಲ್ಲದೇ ಇದ್ದರೂ ಸಹ ಅರ್ಜಿದಾರರು ಪ್ರತಿಕ್ರಿಯಿಸಿರುವುದಿಲ್ಲ ಎಂದು ನಮೂದಿಸಬೇಕಾಗುತ್ತದೆ ಎಂದರೆ ಸರಿ. ಅರ್ಜಿದಾರರು ಉದ್ದೇಶಪೂರ್ವಕವಾಗಿ MMSE, Neuropsychological ಪರೀಕ್ಷೆಗೆ ಸಹಕರಿಸಿಲ್ಲದೇ ಇರುವಾಗ ಅವರು ಉದ್ದೇಶಪೂರ್ವಕವಾಗಿ ಸಹಕರಿಸುತ್ತಿಲ್ಲ ಎಂದು ಕಂಡು ಹಿಡಿಯುವುದು ಕಷ್ಟ ಎಂದರೆ ಸರಿ. ಅರ್ಜಿದಾರರು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ಭೌತಿಕ ಚಿಕಿತ್ಸೆ ಮತ್ತು ಪುನರ್ವಸತಿ ಕೇಂದ್ರದಲ್ಲಿ ಚಿಕಿತ್ಸೆ ಪಡೆದ ದಾಖಲೆಗಳು ಇಲ್ಲದೇ ಇದ್ದಾಗ ಅವರಿಗೆ Left Hemiparesis ಈಗಾಲು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

12. ಅರ್ಜಿದಾರರ Impaired Memory ಬಗ್ಗೆ ನನ್ನ ವರದಿಯಲ್ಲಿ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಇರುವುದಿಲ್ಲ ಎಂದರೆ ಸರಿ. ಅರ್ಜಿದಾರರಿಗೆ ಚಿಕಿತ್ಸೆ ನೀಡಿದ ವೈದ್ಯರ ಅಭಿಪ್ರಾಯ ಪಡೆಯದೇ ಮತ್ತು ನಾನು ಚಿಕಿತ್ಸೆ ನೀಡಿದೇ ಇರುವುದರಿಂದ ಅರ್ಜಿದಾರರ ನರ ಅಂಗನ್ಯೂನತೆ ನಿರ್ಧರಿಸಲು ನಾನು ಸೂಕ್ತ ವ್ಯಕ್ತಿಯಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು

ಸಾಮಾನ್ಯವಾಗಿದ್ದರೂ ಸಹ ಅವರಿಗೆ ಹೆಚ್ಚಿನ ಪರಿಹಾರ ಸಿಗಲಿ ಎಂದು ಹೆಚ್ಚಿನ ನರ ಅಂಗನ್ಯೂನತೆಯನ್ನು ನಿರ್ಧರಿಸಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಎದುರುದಾರರು ಏಕ-ಪಕ್ಷೀಯ. ಆದ್ದರಿಂದ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)**

**(ಓ.ಹೇ.ಕೇ.ಸ.ಇ)**

**3 ನೇ ಹೆಚ್ಚುವರಿ ಲಘು ವ್ಯವಹಾರಗಳ
ನ್ಯಾಯಾಧೀಶರು, ಬೆಂಗಳೂರು.**